# ನಿನ್ನ ನೋಡಿ ಧನ್ಯನಾದೆನೊ ಹೇ ಶ್ರೀನಿವಾಸ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 81.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 292.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 338. These lyrics are slightly different and not considered here.
4. **Note:** The lyrics given in yellow highlights are as per Ref. 2. The lyrics given without highligts are as per Ref. 1. But the lyrics are slightly different in Ref. 3 and not considered here.
5. **Note:** The singer has followed lyrics as in Ref. 2.

| | |
|---|---|
| ರಾಗ: ಶಂಕರಾಭರಣ ತಾಳ: ರೂಪಕ | ರಾಗ: ನಾದನಾಮಕ್ರಿಯೆ ತಾಳ: ರೂಪಕ |
| ನಿನ್ನ ನೋಡಿ ಧನ್ಯನಾದೆನೋ | ನಿನ್ನ ನೋಡಿ ಧನ್ಯನಾದೆನೋ |
| ಹೇ ಶ್ರೀನಿವಾಸ \|\| ಪ \|\| | ಹೇ ಶ್ರೀನಿವಾಸ |
| ನಿನ್ನ ನೋಡಿ ಧನ್ಯನಾದೆ | ನಿನ್ನ ನೋಡಿ ಧನ್ಯನಾದೆ |
| ಎನ್ನ ಮನೋನಯನಕೀಗ | ಎನ್ನ ಮನದಿ ನಿಂತು ಸುಪ್ರ - |
| ಲಿನ್ನು ದಯಮಾಡು ಸುಪ್ರ - | ಸನ್ನ ದಯಮಾಡಿ ನೀನು |
| ಸನ್ನ ಸ್ವಾಮಿ ಪಾಂಡುರಂಗ \|\| ಅಪ \|\| | ಮುನ್ನಿನಂತೆ ಸಲಹಬೇಕೊ |
| ಪಕ್ಷಿ ವಾಹನ ಲಕ್ಷ್ಮೀ ರಮಣ | ಲಕ್ಷ್ಮೀ ರಮಣ ಪಕ್ಷಿ ವಾಹನ |
| ಲಕ್ಷ್ಮೀ ನಿನ್ನ ವಕ್ಷದಲ್ಲಿ | ಲಕ್ಷ್ಮೀ ನಿನ್ನ ವಕ್ಷದಲ್ಲಿ |
| ರಕ್ಷ ಶಿಕ್ಷಣ ದಕ್ಷ ಪಾಂಡವ | ರಕ್ಷಣ ಶಿಕ್ಷಣ ದಕ್ಷ ಪಾಂಡವ |
| ಪಕ್ಷ ರಕ್ಷ ಕಮಲಾಕ್ಷ \|\| ೧ \|\| | ಪಕ್ಷ ಕಮಲಾಕ್ಷ ರಕ್ಷಿಸು |
| ದೇಶ ದೇಶ ತಿರುಗಿ ನಾನು | ದೇಶ ದೇಶಗಳನು ತಿರುಗಿ |
| ಆಶಾಬದ್ಧನಾದೆ ಸ್ವಾಮಿ | ಆಶಾಬದ್ಧನಾದೆ ಸ್ವಾಮಿ |
| ದಾಸನು ನಾನಲ್ಲವೇ ಜಗ- | ದಾಸ ನೆನಿಸಿ ಎನ್ನ ಜಗ - |
| ದೀಶ ಶ್ರೀಶ ಶ್ರೀನಿವಾಸ \|\| ೨ \|\| | ದೀಶ ಕಾಯೊ ವಾಸುದೇವ |

| | |
|---|---|
| ಕಂತುಜನಕ ಕೇಳೋ ನೀ ನಿ- | ಕಂತುಜನಕ ಕೊಟ್ಟು ಎನಗೆ |
| ರಂತರದಿ ನಿನ್ನ ಸೇವೆ | ಅಂತರಂಗದ ಸೇವೆಯನ್ನು |
| ಅಂತರಂಗದಿ ಪಾಲಿಸಯ್ಯ | ಅಂತರವಿಲ್ಲದೆ ಪಾಲಿಸಯ್ಯ |
| ಹೊಂತಕಾರಿ ಪುರಂದರ ವಿಠ್ಠಲ ‖ ೩ ‖ | ಹೊಂತಕಾರಿ ಪುರಂದರ ವಿಠ್ಠಲ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಎನ್ನ ಮನೋನಯನಕೀಗಲಿನ್ನು** – ಇನ್ನು ಈಗ ನನ್ನ ಮನಸ್ಸಿನ ಕಣ್ಣುಗಳಿಗೆ, ಎಂದರೆ ಭಾವನೆಗಳಿಗೆ, ದಯಮಾಡಿಸು.

**ಪಕ್ಷಿವಾಹನ** – ಗ್ವರುಡನನ್ನೇರಿ ಹೋಗುವವನು.

**ವಕ್ಷದಲ್ಲಿ** – ಎದೆಯಲ್ಲಿ; ವಕ್ಷಃಸ್ಥಳಲಕ್ಷ್ಮಿ

**ರಕ್ಷ ಶಿಕ್ಷಣದಕ್ಷ** – ಸಜ್ಜನರನ್ನು ಕಾಪಾಡುವುದರಲ್ಲೂ ದುರ್ಜನರನ್ನು ಕಾಡುವುದರಲ್ಲೂ ಗಟ್ಟಿಗ.

**ಕಂತುಜನಕ** – ಮನ್ಮಥನ ತಂದೆ.

**ನಿರಂತರದಿ** – ಎಡೆಬಿಡದೆ.

**ಹೊಂತಕಾರಿ** – ಹಲವು ಉಪಾಯಗಳನ್ನು ಬಲ್ಲವನು, ಚತುರ.

**Classification:** Keerthane
**Ankita:** purandara vittala
**Location:** NA
**Category:** Jeevanoddhara, bhakti, Pooja Tatva
**Sub-Category:** dhanya, srinivasa, pakshi, Lakshmi, padma, mana, kannu, daya, pandava,
**Pravachana:** NA
**Explanation:** NA